ಮಾಡುವಷ್ಟರಲ್ಲಿ ನಂಗೆ ಸಾಕಾಗಿ ಹೋಯ್ತು ಎಂದು ಹೇಳುವಾಗ ಸತ್ಯನ ಕಣ್ಣಲ್ಲೂ ನೀರಿತ್ತು. ಎದುರು ಕೂತವರಿಗೆ ಮಾತಾಡಲು ಅವಕಾಶ ಕೊಡದೆ ಒಂದೇ ಸಮ ಮಾತನಾಡುವ ಸತ್ಯ ಈಗ ಮಾತು ಮರೆತವನಂತೆ ದಿಕ್ಕೆಟ್ಟು ಕೂತಿದ್ದ!. ಅಣ್ಣನ ಮಕ್ಕಳ ಅಕಾಲಿಕ ಸಾವು ಅವನ ಮಾತುಗಳನ್ನು ಕಸಿದುಕೊಂಡಿತ್ತು. ತನ್ನ ಮಕ್ಕಳಿಗೂ ಏನಾದರೂ ಆಗಬಹುದು ಅನ್ನೋ ಭಯ ಅವನಿಗೆ ಇರಬಹುದೇ ಅನ್ನಿಸಿ ತಲೆ ತಗ್ಗಿಸಿ ಕೂತಿದ್ದ ಸತ್ಯನ ಮುಖವನ್ನೇ ವಿಶ್ವ ದಿಟ್ಟಿಸಿದ.

'ಏನೋ ಆಗಬಾರದಿತ್ತು, ಆಗಿಹೋಯ್ತು. ಹಂಗಂತ ನಾವು ಅಳ್ತ ಕೂತಿರೋಕೆ ಆಗುತ್ತ...'ಎನ್ನುತ್ತ, 'ನೀನು ಊಟ ಮಾಡಿ ರೆಸ್ಟ್ ತಗೋ. ನೀನು ಬಂದಿರೋ ವಿಷಯವನ್ನು ನಾರ್ವೇಕರ್‌ಗೆ ಫೋನ್ ಮಾಡಿ ಹೇಳಿದ್ದೀನಿ. ಸಂಜೆ ಐದರ ಹೊತ್ತಿಗೆ ನಾವು ಬರ್ತೀವಿ, ರೆಡಿಯಾಗಿರು. ಇವತ್ತು ಕೊಪ್ಪದಲ್ಲೇ ಇರೋ ಒಬ್ಬಿಬ್ಬರನ್ನಾದರೂ ಭೇಟಿ ಮಾಡೋಣ. ನಾಡಿದ್ದು ಭಾನುವಾರ ನನ್ನ ಜತೆ ನೀನೂ ಉಡುಪಿಗೆ ಬರಬೇಕು. ನಮ್ಮ ಕುಲದೇವರು ಇರೋದು ಉಡುಪಿಯಿಂದ ಹದಿನೈದಿಪ್ಪತ್ತು ಕಿಲೋಮೀಟರು ದೂರದಲ್ಲಿ. ಅಲ್ಲಿ ದೇವಸ್ಥಾನವೇನೂ ಇಲ್ಲ. ನಮ್ಮ ಜಮೀನಿನಲ್ಲಿ ಒಂದು ದೊಡ್ಡ ಮರದ ಕೆಳಗೆ ಬಂಡೆ ಇತ್ತಂತೆ. ಅದರ ಮೇಲೆ ನರಸಿಂಹದೇವರು ಕೂತಿದ್ದನ್ನು ನಮ್ಮ ಹಿರಿಯರೊಬ್ಬರು ಕನಸಿನಲ್ಲಿ ಕಂಡಿದ್ದರಂತೆ! ಆ ಬಂಡೆಯನ್ನೇ ನರಸಿಂಹ ದೇವರ ಪೀಠ ಅಂದುಕೊಂಡು ಪೂಜೆ ಮಾಡ್ತಿದರಂತೆ! ಅಜ್ಜ ಬದುಕಿರೋವರೆಗೆ ಪ್ರತಿ ವರ್ಷ ಕುಲದೇವರಿಗೆ ಹೋಗಿ ಪೂಜೆ, ಹರಕೆ ಕೊಟ್ಟು ಬರ್ತಿದ್ದರು. ಈಗ ನಾವು ಹೋಗಿ ದೇವರ ಪೀಠ ಹುಡುಕಬೇಕು. ಅಲ್ಲಿ ಪೂಜೆಗೆ ಈಗ ವ್ಯವಸ್ಥೆ ಮಾಡುವಂತಿಲ್ಲ. ಅದೆಲ್ಲ ಸೂತಕ ಮುಗಿದ ಮೇಲೆ. ಆ ಜಮೀನನ್ನು ನಮ್ಮ ಹಿರಿಯರು ಯಾರಿಗೋ ಮಾರಾಟ ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿಕೊಂಡು, ಜಮೀನು ಮಾಲೀಕರನ್ನು ಕಂಡು ನಾವು ಇಲ್ಲಿಗೆ ಬಂದು ಪೂಜೆ ಮಾಡಿಕೊಂಡು ಹೋಗ್ತೀವಿ ಅಂತ ಹೇಳಿ ಬರಬೇಕು. ಅಣ್ಣ ನಮ್ಮ ಜತೆ ಬರ್ತಿಲ್ಲ, ಚಿದಂಬರ ಬರ್ತಾನೆ...' ಎಂದ.

*

'ವಿಷ್ಣು ಭಟ್ಟರ ಮನೆಗೆ ಹೋಗೋ ದಾರಿಯಲ್ಲೇ ರಫೀಕನ ಅಂಗಡಿ ಇರೋದು. ಅವನು ಅಂಗಡಿಯಲ್ಲಿದ್ದರೆ ಮಾತಾಡಿಸಿಕೊಂಡು ಭಟ್ಟರ ಮನೆಗೆ ಹೋಗುವಾ...' ಎಂದು ನಾರ್ವೇಕರ್ ಹೇಳಿದ.

ಲೇವಾದೇವಿ ಅಂಗಡಿಯ ಗಾದಿ ಮೇಲಿನ ದಿಂಬಿಗೆ ಒರಗಿ ಕೂತಿದ್ದ ಹಾಜಿ ರಫೀಕ್ ಸಾಬರು, 'ಅರೇ ಸತ್ಯಮೂರ್ತಿ, ಜಗನ್ನಾಥ್ ಭಾಯ್ ಬನ್ನಿ, ಬನ್ನಿ ಎನ್ನುತ್ತ ಲಗುಬಗೆಯಿಂದ ಎದ್ದು ನಿಂತರು. ಅಂಗಡಿ ಮುಂದೆ ಕಾರು ನಿಲ್ಲಿಸಿ ನೀವು ಇಳೀವಾಗ ಇವರನ್ನೆಲ್ಲೋ ನೋಡಿದ್ದೀನಿ ಅನ್ನಿಸ್ತು. ನೀವೇ ಇರಬಹುದು ಅಂತ ಗೆಸ್ ಮಾಡಿದೆ. ನೋಡಿದರೆ ಅದು ನೀವೇ! ನಿಮ್ಮ ಜತೆ ನಾರ್ವೇಕರ್ ಇದ್ದನಲ್ಲ ಹಾಗಾಗಿ ಗುರುತಿಸೋಕೆ ಸುಲಭ ಆಯ್ತು ಎನ್ನುತ್ತ, 'ಎಷ್ಟು ಕಾಲ ಆಯ್ತು ಮಾರಾಯರೇ ನಿಮ್ಮಿಬ್ಬರನ್ನೂ ನೋಡಿ? ಹೇಗಿದ್ದೀರಿ....' ಎನ್ನುತ್ತ ರಫೀಕ್ ಸಾಬರು ಕುಶಲೋಪರಿ ವಿಚಾರಿಸಿದರು.

'ಓದುವಾಗ ನಿಮ್ಮನ್ನು ಜೂನ್, ಜುಲೈ ಅಂತ ಕರೀತಿದ್ದೆ. ನಿಮ್ಮಿಬ್ಬರಲ್ಲಿ ಒಬ್ಬ ಕಣ್ಣಿಗೆ ಬಿದ್ದ ಕೂಡಲೇ ಇನ್ನೊಬ್ಬ ಎಲ್ಲಿ ಅಂತ ಹುಡುಕ್ತಾ ಇದ್ದೆ. ಈಗಲೂ ಇಬ್ಬರೂ ಒಟ್ಟಿಗೆ ಬಂದಿದ್ದೀರಿ, ಸಂತೋಷ ಆಯ್ತು...' ಎನ್ನುತ್ತ ರಫೀಕ್ ಸಾಬರು ಗಡ್ಡ ನೇವರಿಸಿಕೊಂಡು ದೇಶಾವರಿ ನಗೆ ನಕ್ಕರು. ಐದಡಿ ಎತ್ತರದ ರಫೀಕ್ ಗಡ್ಡ ಬಿಟ್ಟು ಧಾರ್ಮಿಕ ಮನುಷ್ಯನ ರೂಪ ಧರಿಸಿದ್ದ. ವಯಸ್ಸಿನ ಭಾರದ ಜತೆಗೆ ಹಣ್ಣಾದ ದುಂಡನೆ ದೇಹ ಹೊತ್ತು, ಮಾಗಿದ ಸೇಬಿನಂತೆ ಕಾಣುತ್ತಿದ್ದ! ಪಿಯುಸಿ ಓದುವಾಗ ಎಲ್ಲರನ್ನೂ ಚುಡಾಯಿಸುತ್ತ, ಗೋಳು ಹುಯ್ದುಕೊಳ್ತಿದ್ದ ರಫೀಕ ಇವನೇ ಎಂದು ಇಬ್ಬರಿಗೂ ಅನ್ನಿಸಿತು. 'ರಫೀಕ್ ಸಾಬಿ, ಈಗ ಕೊಪ್ಪದ ಮಹಮಡನ್ ಸಮಾಜದ ಲೀಡರ್. ಹಾರ್ಡ್‌ವೇರ್ ಅಂಗಡಿ ಜತೆಗೆ ಲೇವಾದೇವಿ ವ್ಯವಹಾರ ಮಾಡಿಕೊಂಡಿದ್ದಾನೆ...' ಎಂದು ನಾರ್ವೇಕರ್ ಹೇಳಿದ್ದು ಇಬ್ಬರಿಗೂ ನೆನಪಾಯಿತು.

ಹಳೇ ಸ್ನೇಹಿತರನ್ನು ಒಟ್ಟಿಗೆ ನೋಡಿದ ಸಂತೋಷದ ಗಡಿಬಿಡಿಯಲ್ಲಿದ್ದ ರಫೀಕ್ ಸಾಹೇಬರಿಗೆ ಏನು ಮಾತಾಡಬೇಕು ಅನ್ನೋದು ತಕ್ಷಣಕ್ಕೆ ಗೊತ್ತಾಗದೆ ಮತ್ತೆ ಮತ್ತೆ ಹೇಗಿದ್ದೀರಿ ಎಂದು ಕೇಳಿದರು. 'ಇಷ್ಟು ವರ್ಷಗಳಾದ ಮೇಲೆ ನನ್ನ ನೋಡಬೇಕು ಅಂತ ಇಲ್ಲೀತನಕ ಹುಡುಕಿಕೊಂಡು ಬಂದಿದ್ದೀರಲ್ಲ! ನಂಗೆ ತುಂಬಾ ಸಂತೋಷ ಆಗ್ತಿದೆ ಮಾರಾಯರೇ' ಎನ್ನುತ್ತ ಕುರ್ಚಿಗಳನ್ನು ತರಿಸಿ ಹಾಕಿಸಿದರು. ತಮ್ಮ ಸುತ್ತ ಇದ್ದವರಿಗೆ, 'ಇವರು, ನನ್ನ ದೋಸ್ತ್‌ಗಳು. ನಾವು ಒಟ್ಟಿಗೆ